**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ.84/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 4**

**ದಿನಾಂಕಃ** 01.07.2026 **ಸಿಡಬ್ಲ್ಯೂ 15**

| | |
|---|---|
| ಹೆಸರು | ಅರವಿಂದ್ ಬಿ ಎಸ್ |
| ತಂದೆಯ ಹೆಸರು | ಸೋಮಶೇಖರ |
| ವಯಸ್ಸು | 38 ವರ್ಷ |
| ಉದ್ಯೋಗ | ಪಿಎಸ್‌ಐ ಜಿಲ್ಲಾ ವಿಶೇಷ ವಿಭಾಗ ಜಿಲ್ಲಾ ಪೋಲೀಸ್ ಕಚೇರಿ, ದಾವಣಗೆರೆ |
| ವಾಸ ಸ್ಥಳ | ದಾವಣಗೆರೆ. |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ದಿಃ10.08.2022 ರಿಂದ ದಿಃ07.02.2024 ರವರೆಗೆ ಹರಿಹರ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ15.10.2022 ರಂದು ಸಂಜೆ 6.30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ.1 ರವರು ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂ.157/2022 ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ತನಿಖೆಯನ್ನು ಮುಂದುವರೆದು ಚಾಸಾ.4 ರವರ ಮೂಲಕ ಚಾಸಾ.2, 3 ರವರನ್ನು ಠಾಣೆಗೆ ಕರೆಸಿ ಸದರಿ ಪ್ರಕರಣದಲ್ಲಿ ಪಂಚರಾಗಿ ಸಹಕರಿಸಲು ನೋಟೀಸ್ ಜಾರಿ ಮಾಡಿ ಸಹಿ ಪಡೆದಿರುತ್ತೇನೆ. ಚಾಸಾ.1 ರಿಂದ 5 ರವರೊಡನೆ ಇಲಾಖಾ ವಾಹನದಲ್ಲಿ ಹರಿಹರ ಹರಪ್ಪನಹಳ್ಳಿ ರಸ್ತೆಯ ಗುತ್ತೂರು ಗ್ರಾಮದ ಗಣೇಶ ದೇವಸ್ಥಾನದ ಹತ್ತಿರ ತಲುಪಿ ಕೆಎ-17 ಹೆಎಲ್-5009 ಟಿವಿಎಸ್ ವಾಹನದಲ್ಲಿ ಬರುತ್ತಿದ್ದ ಆಸಾಮಿಯನ್ನು ಅನುಮಾನದಿಂದ ನಿಲ್ಲಿಸಿ ಪರಿಶೀಲಿಸಿ ನೋಡಲಾಗಿ ಆತನ ವಾಹನದಲ್ಲಿ 4 ಪ್ಲಾಸ್ಟಿಕ್ ಚೀಲಗಳಲ್ಲಿ ಪಡಿತರ ರಾಗಿ ಇರುವಂತೆ ಕಂಡು ಬಂದಿದ್ದು ಆತನ ಹೆಸರು ವಿಳಾಸ ಕೇಳಲಾಗಿ ವೆಂಕಟೇಶ ನಾಯ್ಕ ತಂದೆ ಪರಮೇಶ ನಾಯ್ಕ 28 ವರ್ಷ ಹಳೇ ಚಿಕ್ಕನಹಳ್ಳಿ ಅಂತ ತಿಳಿಸಿರುತ್ತಾನೆ. ಚಾಸಾ.1, 2,3 ರವರ ಸಮಕ್ಷಮದಲ್ಲಿ 4 ಚೀಲಗಳನ್ನು ತೂಕ ಮಾಡಿ ನೋಡಲಾಗಿ 145 ಕೆಜಿ ರಾಗಿ ಇದ್ದು ಇದರಲ್ಲಿ ರಾಸಾಯನಿಕ ಪರೀಕ್ಷೆಗಾಗಿ 4 ಕೆಜಿ ರಾಗಿಯನ್ನು ಜಪ್ತು ಪಡಿಸಿಕೊಂಡು, ಆರೋಪಿತರ ವಾಹನವನ್ನು ಜಪ್ತು ಮಾಡಿಕೊಂಡು 7.30 ಗಂಟೆಯಿಂದ 8.30 ರವರೆಗೆ ಸ್ಥಳದಲ್ಲಿಯೇ ಪಂಚನಾಮೆ ಬರೆದು ಪೋಟೋ ತೆಗೆದಿರುತ್ತೇನೆ. ನಂತರ ಠಾಣೆಗೆ ಬಂದು ಚಾಸಾ.4, 5 ರವರ ಹೇಳಿಕೆ ಪಡೆದಿರುತ್ತೇನೆ. ಆರೋಪಿತನ ವಿಚಾರಣೆ ಮಾಡಿ ಸ್ವಇಚ್ಚಾ ಹೇಳಿಕೆ ಪಡೆದಿರುತ್ತೇನೆ. ಚಾಸಾ.7 ರವರಿಂದ 65 ಬಿ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ದಿಃ16.10.2022 ರಂದು ಆರೋಪಿತನನ್ನು ಮಾನ್ಯ ನ್ಯಾಯಾಂಗ ಬಂದನಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿಃ05.11.2022 ರಂದು ಆರೋಪಿತ ವಾಹನದ ಬಿ ಎಕ್ಸಟ್ರಾಕ್ಟನ್ನು ಆ ಟಿ ಒ ದಾವಣಗೆರೆರವರಿಂದ ಪಡೆದಿರುತ್ತೇನೆ. ಅಮಾನತ್ತು ಪಡಿಸಿಕೊಂಡಿರುವ

ರಾಗಿಯನ್ನು ಸಂಬಂಧಪಟ್ಟ ಇಲಾಖೆಗೆ ವರ್ಗಾವಣೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿರುತ್ತೇನೆ. ದಿಃ07.11.2022 ರಂದು ಎಫ್ ಸಿ ಎ ಶಿವಮೊಗ್ಗರವರಿಂದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ದಿಃ10.11.23 ರಂದು ಚಾಸಾ.1ರವರ ಕರ್ತವ್ಯ ದೃಢೀಕರಣ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ದಿಃ12.11.2023 ರಂದು ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನಿಪಿ.1 ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.2, 5, 6 ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.2 ಸಿ, 5 ಬಿ, 6 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿಪಿ.7 ಎ ಎಂದು, ತಹಸೀಲ್ದಾರವರು ಬರೆದ ಪತ್ರ ನಿಪಿ.8, ಕರ್ತವ್ಯ ದೃಢೀಕರಣ ಪ್ರಮಾಣ ಪತ್ರ ನಿಪಿ.9, ಸಾಕ್ಷಿಯ ಸಹಿ ನಿಪಿ.9 ಎ, ರಾಸಾಯನಿಕ ವರದಿ ನಿಪಿ.10, ಸಾಕ್ಷಿಯ ಸಹಿ ನಿಪಿ.10 ಎ, 65 ಬಿ ಪ್ರಮಾಣ ಪತ್ರ, ನಿಪಿ.11, ಸಾಕ್ಷಿಯ ಸಹಿ ನಿಪಿ.11 ಎ, ಆರೋಪಿಯ ಸ್ವಖುಷಿ ಹೇಳಿಕೆ ನಿಪಿ.12, ಸಾಕ್ಷಿಯ ಸಹಿ ನಿಪಿ.12 ಎ, ಬಿ ಎಕ್ಸ್ ಟ್ರಾಕ್ಟ ನಿಪಿ.13, ಸಿಡಿಯನ್ನು ನಿಪಿ.14 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಹಾಗೂ ಮು.ಮಾ.ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಅಕ್ಕಿಯ 4 ಪ್ಯಾಕೆಟ್ ಗಳನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ರಿಂದ 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್ ಬಿ ವಕೀಲರಿಂದಃ**

ನಿಪಿ.1ರಲ್ಲಿ ನಾನು ಯಾವ ನಮೂನೆಯ ದೂರನ್ನು ತೆಗೆದುಕೊಂಡಿರುತ್ತೇನೆ ಎಂದು ನಮೂದು ಇಲ್ಲ ಎಂದರೆ ಸರಿ. ನಾನು ಪ್ರ.ವ.ವರದಿಯ ತಡವಾದ ಕಲಂನಲ್ಲಿ ಬರೆದಿಲ್ಲ ಎಂದರೆ ಸರಿ. ನೋಟೀಸನಲ್ಲಿ ಸಮಯ ಹಾಗೂ ಸ್ಥಳವನ್ನು ತಿಳಿಸಿಲ್ಲ ಎಂದರೆ ಸರಿ. ಫೋಟೋದಲ್ಲಿ ನಮ್ಮ ವಾಹನ ಕಾಣಿಸುತ್ತಿಲ್ಲ ಎಂದರೆ ಸರಿ. ಪಂಚರು ಸ್ಥಳೀಯ ನಿವಾಸಿಗಳಲ್ಲ ಎಂದರೆ ಸರಿ. ತೂಕ ಮಾಡಿದ ಒಟ್ಟು 145.200 ಗ್ರಾಂ ಆಗುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. 200 ಗ್ರಾಂ ಸ್ಥಳದಲ್ಲಿ ತೂಕ ಮಾಡುವಾಗ ಬಿದ್ದಿರಬಹುದು. ಆ ರೀತಿ ನಾನು ಪಂಚನಾಮೆ ಬರೆದಿರುವುದಿಲ್ಲ. 4 ಪ್ರತ್ಯೇಕವಾದ ಬಿಳಿ ಚೀಲಗಳಲ್ಲಿ ಜಪ್ತು ಪಡಿಸಿಕೊಂಡಿರುತ್ತೇನೆ. ಪಂಚನಾಮೆಯಲ್ಲಿ ಸೀಲನ್ನು ಯಾವುದರ ಸಹಾಯದಿಂದ ಹಾಕಲಾಗಿದೆ ಎಂದು ಬರೆದಿಲ್ಲ ಎಂದರೆ ಸರಿ. 4 ಚೀಲಗಳಲ್ಲಿ ಜಪ್ತು ಪಡಿಸಿ ಕೊಂಡಿರುವುದನ್ನು ಫೋಟೋ ತೆಗೆದಿಲ್ಲ ಎಂದರೆ ಸರಿ. 3 ಚೀಲಗಳನ್ನು ಫೋಟೋದಲ್ಲಿ ಕಾಣಿಸಿಲ್ಲ ಎಂದರೆ ಸರಿ. ಆರೋಪಿತನಿಗೆ ಜಪ್ತುವಾದಿಯನ್ನು ನೀಡಿರುವುದಿಲ್ಲ. ಆರೋಪಿತನ ಸ್ವಖುಷಿ ಹೇಳಿಕೆಯನ್ನು ನಾನು ಸ್ಥಳದಲ್ಲಿ ಪಡೆದಿಲ್ಲ ಎಂದರೆ ಸರಿ. ನಾನು ಚಾಸಾ.4, 7ರವರ ಸಹಿ ಪಡೆದಿಲ್ಲ ಎಂದರೆ ಸಾಕ್ಷಿ ಚಾಸಾ.4ರವರ ಸಹಿ ಪಡೆದಿಲ್ಲ ಎಂದು ಉತ್ತರಿಸುತ್ತಾರೆ. ನಾನು ಜಪ್ತು ಪಡಿಸಿಕೊಂಡ ಮು.ಮಾ.ಗಳ ರಾಸಾಯನಿಕ ಪರೀಕ್ಷೆಗಾಗಿ 23 ದಿನಗಳ ವಿಳಂಬವಾಗಿ ಕಳುಹಿಸಿರುತ್ತೇನೆ ಎಂದರೆ ಸರಿ. ನಾನು ಅದೇ ದಿನ ವರದಿಯನ್ನು ಪಡೆದಿರುತ್ತೇನೆ ಎಂದರೆ ಸರಿ. ವರದಿಯಲ್ಲಿ ಜಪ್ತು ಪಡಿಸಿಕೊಳ್ಳಲಾದ ರಾಗಿ ಪಡಿತರ ರಾಗಿ ಅಲ್ಲ ಅಂತ ವರದಿ ನೀಡಿರುತ್ತಾರೆ ಎಂದರೆ ಸರಿ. ನಿಪಿ.7ರಲ್ಲಿ ಅಕ್ಕಿಯನ್ನು ಅಮಾನತ್ತು

ಪಡಿಸಿಕೊಳ್ಳಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ಜಿಲ್ಲಾಧಿಕಾರಿಯ ಆದೇಶ ಏನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪಡಿತರ ರಾಗಿ ಹಾಗೂ ಸಾಮಾನ್ಯ ಅಂಗಡಿಗಳಲ್ಲಿ ಸಿಗುವ ರಾಗಿ ಒಂದೇ ತರಹ ಇರುತ್ತದೆ ಎಂದರೆ ಸರಿಯಲ್ಲ. ನಾನು ಆರೋಪಿತರಿಂದ ಪ್ರಶ್ನೆ ರೂಪದಲ್ಲಿ ಸ್ವಖುಷಿ ಹೇಳಿಕೆ ಪಡೆದಿಲ್ಲ ಎಂದರೆ ಸರಿ. ಆರೋಪಿ ಹೇಳಿದ ಸ್ಥಳದಲ್ಲಿ ನಾನು ತನಿಖೆ ಮಾಡಿರುವುದಿಲ್ಲ. ಪಡಿತರ ರಾಗಿಯನ್ನು ವಿತರಣೆ ಮಾಡಿದ ಬಗ್ಗೆ ನಾನು ದಾಖಲೆಗಳನ್ನು ಪಡೆದಿರುವುದಿಲ್ಲ. ಆರೋಪಿತರಿಗೂ ಹಾಗೂ ಆರೋಪಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು.ಮಾ.ಗಳ ಮೇಲೆ ಮಾದರಿ ಮೊಹರಿನ ಚೀಟಿಯನ್ನು ಅಂಟಿಸಿ ಸಹಿ ಮಾಡಿಲ್ಲ ಎಂದರೆ ಸರಿ. ಫೋಟೋದಲ್ಲಿ 4 ಚೀಲಗಳ ರಾಗಿ ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಕಚೇರಿ ಅಂಕೆ ಸಂಖ್ಯೆಗೋಸ್ಕರ ನಾನು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಅನುಕೂಲಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.